ಶ್ರೀ ಎಂ. ಬಿ. ರಾಮಸ್ವಾಮಿ.— ನಾನು ಆನೇಕಲ್ ತಾಲ್ಲೂಕಿನ ಯಾವ ಯಾವ ಭಾಗದಲ್ಲಿ ಯಾವ ಯಾವ ಬೆಳೆ ಬೆಳೆಯಲಾಗುತ್ತದೆಂದು ಪ್ರಶ್ನೆ ಕೇಳಿದ್ದೆ : ಆದರೆ ಅದು ಬಿಟ್ಟು ಹೋಗಿದೆ. ಈ ತಾಲ್ಲೂಕಿನ ಳಿ ಹೋಬಳಿಗಳಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯಲಾಗುತ್ತದೆ ಎಂಬ ವಿವರ ಕೋಡುತ್ತೀರಾ ?

† ಶ್ರೀ ಎನ್. ಚಿಕ್ಕೇಗೌಡ.— ಆನೇಕಲ್ ತಾಲ್ಲೂಕಿನ ಪ್ರದೇಶಗಳಲ್ಲಿ ಯಾವ ಯಾವ ಬೆಳೆ ಬೆಳೆಯು ಲಾಗುತ್ತದೆಂದು ನನಗೆ ಪ್ರಶ್ನೆ ಬಂದಿತ್ತು. ಅದರಂತೆ ಉತ್ತರ ಕೊಡಲಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ನನಗೆ ತಿಳಿದಿರುವಂತೆ ಎರಡು ಹೋಬಳಿಗಳಲ್ಲಿ ಶಕ್ತಿಮಾನ್ ಜೋಳ ವನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಆದರೆ ಇಲ್ಲಿ ಒದಗಿಸಿರುವ ಉತ್ತರ ಸರಿಯಲ್ಲವೆಂದು ನನ್ನಗನ್ನಿಸು ತ್ತದೆ. ಉತ್ತರದಲ್ಲಿ ೩ ಹೆಕ್ಟೇರ್ ಪ್ರದೇಶದಲ್ಲಿ ಶಕ್ತಿಮಾನ್ ಜೋಳವನ್ನು ಬೆಳೆಯಲಾಗುತ್ತಿದೆ ಎಂದು ಹೇಳಿದ್ದೀರಿ, ಇದು ಸರಿಯೇ ?

ಶ್ರೀ ಎನ್. ಚಿಕ್ಕೇಗೌಡ.— ವಿವರವಾದ ಮಾಹಿತಿ ಈಗ ನನ್ನ ಬಳಿ ಇಲ್ಲ, ಒಟ್ಟು ತಾಲ್ಲೂಕಿನ ಬಗ್ಗೆ ಈಗ ತಮಗೆ ಮಾಹಿತಿಯನ್ನು ಒದಗಿಸಲಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.— ಒಟ್ಟು ೩,೭೫೪ ಹೆಕ್ಟಾರ್‌ಗಳಲ್ಲಿ ೬,೧೫೩ ಟನ್ ಭತ್ತವನ್ನು ಬೆಳೆಯಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ, ಈ ಅಂಕಿಅಂಶಗಳು ಸರಿಯಾಗಿದೆ ಎಂದು ಹೇಳುತ್ತೀರಾ ಇದಕ್ಕಿಂತ ಜಾಸ್ತಿ ಬೆಳೆದಿಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ — ಕ್ರಾಪ್ ಎಕ್ಸ್‌ಪರಿಮೆಂಟ್ಸ್ ಪ್ರಕಾರ ಮತ್ತು ನಮ್ಮ ಅಧಿಕಾರಿಗಳು ಕೊಟ್ಟ ಮಾಹಿತಿ ಪ್ರಕಾರ ೬,೧೫೩ ಟನ್ ಭತ್ತ ಬೆಳೆಯಲಾಗಿದೆ ಎಂದು ಇಲ್ಲಿ ಹೇಳಲಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.— ಇಲ್ಲಿ ಕೊಟ್ಟಿರುವ ಪ್ರೊಡಕ್ಷನ್‌ಗೂ ಮತ್ತು ವಸೂಲಿ ಮಾಡಿ ರುವ ೫ ಸಾವಿರ ಟನ್ ಲೆವಿಗೂ ಸಮತೋಲನ ಮಾಡಿ ನೋಡಿದರೆ ಒಂದಕ್ಕೊಂದು ತದ್ವಿರುದ್ಧವಾಗು ವುದಿಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ.— ಆ ಪ್ರಶ್ನೆಗೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.— ಇದನ್ನೇ ಆಧಾರವಾಗಿಟ್ಟುಕೊಂಡು ಬೇರೆ ಒಂದು ಪ್ರಶ್ನೆ ಕೇಳಿ.

Misappropriation of Fuuds by Chairmen of Village Panchayats

683 SRI M. B. RAMASWAMY (Anekal).— Will the Minister for Rural Development and Social Welfare be pleased to state.—

(*c*) the number of Chairmen (V. P.) who have misappropriated the V. P. funds in Anekal Taluk ;

(*b*) whether several Chairmen in the said taluk have sold the Government as well as V P. Lands private person :

(*c*) if so, the details of lands sold ;

(*d*) whether any Chairmen have encroached the tank beds and converted them into wet lands ;

(*e*) if so, the number of cases that are pending against them :

(*f*) whether Government have issued instruction to reserve 18 per cent of funds for Scheduled Castes and Scheduled Tribes in Panchayat Budget ;

(*g*) if so, the number of Village Panchayats which have adhered to this instructions issed by the Government :

SRI N. RACHAIAH (Minister for Rural Development and Social Welfare).—

(*a*) Five

(*b*) One instance has come to the notice.

(*c*) 4 acres 30 guntas in survey No. 142 of Rachamanahalli village are sold to 4 private persons.

(*d*) Yes.

(*e*) Nil.

(*f*) Yes.

(*g*) 44 (Forty four)

ಶ್ರೀ ಎಂ. ಬಿ. ರಾಮಸ್ವಾಮಿ.— ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ೫ ಮಂದಿ ಎಂದು ಹೇಳಿದ್ದೀರಿ. ಅವರು ಯಾವ ಯಾವ ಗ್ರೂಪ್ ಪಂಚಾಯಿತಿಗೆ ಸೇರಿದವರು ಎಂಬುದನ್ನು ಹೇಳುತ್ತೀರಾ?

† ಶ್ರೀ ಎನ್. ರಾಚಯ್ಯ.—

	ರೂ. ಪೈಸೆ
ಇಂಡಲವಾಡಿ	೪,೨೦೦—೨೪
ಜಿಗಣಿ	೭,೦೪೫—೨೦
ಹುಸಕೂರು	೧,೦೭೮—೯೮
ಬುಕ್ಕಸಾಗರ	೩,೦೦೦—೦೦
ಮುಗಲೂರು	೩,೨೯೬—೧೧

ಈ ರೀತಿ ೫ ಪಂಚಾಯಿತಿಗಳಲ್ಲಿ ಒಟ್ಟು ೧೮, ೬೧೫ ರೂಪಾಯಿ ೧೩ ಪೈಸೆ ದುರುಪಯೋಗವಾಗಿರುವುದಾಗಿ ತಿಳಿದುಬಂದಿದೆ

ಶ್ರೀ ಎಂ. ಬಿ. ರಾಮಸ್ವಾಮಿ.— ನನ್ನ ಮೂರನೇ ಪ್ರಶ್ನೆಗೆ ಉತ್ತರವಾಗಿ ೪ ಎಕರೆ ೩೦ ಗುಂಟೆ ಜಮೀನನ್ನು ೪ ಮಂದಿ ಖಾಸಗೀ ವ್ಯಕ್ತಿಗಳಿಗೆ ಮಾರಾಟ ಮಾಡಲಾಗಿದೆ ಎಂದು ಹೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟ ಛೇರ್‌ಮನ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎನ್. ರಾಚಯ್ಯ.— ರಾಚಮಾನಹಳ್ಳಿ ಗ್ರಾಮದ ೧೪೩ನೇ ಸರ್ವೆ ಸಂಖ್ಯೆಯಲ್ಲಿ ೪ ಎಕರೆ ೩೦ ಗುಂಟೆ ಜಮೀನನ್ನು ೪ ಮಂದಿ ಖಾಸಗೀ ವ್ಯಕ್ತಿಗಳಿಗೆ ಮಾರಾಟ ಮಾಡಲಾಗಿದೆ. ಈ ಬಗ್ಗೆ ಅವರ ಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆ ವಿಧಿಸುವ ಬಗ್ಗೆ ಮುಂದುವರೆಯುತ್ತಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.— ನನ್ನ ನಾಲ್ಕನೇ ಪ್ರಶ್ನೆಗೆ ಹೌದು ಎಂದು ಹೇಳಿದ್ದೀರಿ ನನಗೆ ತಿಳಿದಂತೆ ಹಿಂದಿನ ಎಕ್ಸ್ ಎಂ. ಎಲ್. ಎ. ಮಗನು ಕೆರೆದಂಡೆಯನ್ನು ಅತಿಕ್ರಮಿಸಿಕೊಂಡು ಈಗ ಅದನ್ನು ತರಿ ಜಮೀನನ್ನಾಗಿ ಪರಿವರ್ತಿಸಿದ್ದಾರೆ. ಆ ಬಗೆ ಆ ಗ್ರಾಮದಿಂದ ದೂರುಗಳು ಏನಾದರೂ ಬಂದಿದೆಯೇ ? ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎನ್. ರಾಚಯ್ಯ.— ಗೆರಟಿಗನಬೆಲೆ ಛೇರ್‌ಮನ್ ಅವರು ಸರ್ವೆ ನಂ. ೬೮ರಲ್ಲಿ ಒಂದು ಎಕರೆ ೫ ಜಮೀನನ್ನು, ರಾಮಸಾಗರದ ಛೇರ್‌ಮನ್ ಅವರು ಸರ್ವೇ ನಂ. ೧೬೭ರಲ್ಲಿ ೪ ಎಕರೆ ಜಮೀನನು ಮತ್ತು ಲಕ್ಷ್ಮೀಸಾಗರದ ಛೇರ್‌ಮನ್ ಅವರು ಸರ್ವೇ ನಂ. ೧೩೧ ರಲ್ಲಿ ೨ ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆಂದು ವರದಿ ಬಂದಿದೆ.

ಶ್ರೀ ಎನ್. ಬಂಗಾರಪ್ಪ.— ಪಂಚಾಯಿತಿಯ ಅಧ್ಯಕ್ಷರು ಪಂಚಾಯಿತಿಗೆ ಸೇರಿದ ಗೋಮಾಳ ಪ್ರದೇಶವನ್ನು ಪರಭಾರೆ ಮಾಡಿದ್ದಾರೆಂದು ತಿಳಿಸಿದಿರಿ. ಪರಭಾರೆ ಎಂದರೆ ಲೀಸ್‌ಗೆ ಕೊಟ್ಟಿದ್ದಾರೆಯೇ ಅಥವಾ ಹಣಕ್ಕೆ ಮಾರಿದ್ದಾರೆಯೇ ಎಂಬುದನ್ನು ತಿಳಿಸುತ್ತೀರಾ ? ಮತ್ತು ಮಾರಾಟ ಮಾಡಿ ಹಣ ತೆಗೆದುಕೊಂಡಿದ್ದರೆ ಅದನ್ನು ಪಂಚಾಯಿತಿಗೆ ಜಮಾ ಮಾಡಿದ್ದಾರೆಯೇ ? ನನಗೆ ತಿಳಿದಂತೆ, ಇಂತಹ ಜಮೀನನು ಬೇರೆಯವರಿಗೆ ಕೊಡುವುದಿದ್ದರೆ ತಹಶೀಲ್ದಾರರ ಮೂಲಕ ಕೊಡಬೇಕಾಗುತ್ತದೆ.

ಶ್ರೀ ಎನ್. ರಾಚಯ್ಯ.— ಇಲ್ಲಿ ಪರಭಾರೆ ಮಾಡಿಲ್ಲ ಮಾಡಿದ್ದಾರೆ. ಮೊದಲನೇ ಕೇಸ್‌ನಲ್ಲಿ ೨೦ ಗುಂಟೆ ಜಮೀನನ್ನು ೩೦೦ ರೂಪಾಯಿಗಳಿಗೆ, ಎರಡನೇ ಕೇಸ್‌ನಲ್ಲಿ ಎರಡು ಎಕರೆಯನ್ನು ೨ ಸಾವಿರ ರೂಪಾಯಿಗಳಿಗೆ, ಮೂರನೇ ಕೇಸ್‌ನಲ್ಲಿ ಒಂದು ಎಕರೆ ಹತ್ತು ಗುಂಟೆ ಜಮೀನನ್ನು ೫೦೦ ರೂಪಾಯಿಗಳಿಗೆ, ಳನೇ ಕೇಸ್‌ನಲ್ಲಿ ಒಂದು ಎಕರೆಯನ್ನು ೨೦೦ ರೂಪಾಯಿಗಳಿಗೆ ಮಾಡಿದ್ದಾರೆ. ಈ ರೀತಿ ಒಟ್ಟು ೩ ಸಾವಿರ ರೂಪಾಯಿಗಳಿಗೆ ಮಾರಿದ್ದಾರೆ. ಆ ಹಣ ಸರ್ಕಾರಕ್ಕೂ ಬಂದಿಲ್ಲ, ಪಂಚಾಯಿತಿಯ ಫಂಡ್‌ಗೂ ಹೋಗಿಲ್ಲ. ಈ ಬಗ್ಗೆ ತಹಶೀಲ್‌ದಾರರು ವಿಚಾರಣೆ ಮಾಡುತ್ತಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಈ ಜಮೀನುಗಳನ್ನು ಪಂಚಾಯತ್ ರಾಜ್ ವಂತ್ರಿಗಳ ಗಮನಕ್ಕೆ ಹಾಗೂ ಸರ್ಕಾರದ ಗಮನಕ್ಕೆ ತರದೆ ಕೆಲವರು ಅತಿಕ್ರಮಣ ವಂತ್ತು ದುರಾಕ್ರಮಣ ಮಾಡಿಕೊಂಡಿರುವ ಪ್ರಯುಕ್ತ, ಅಂತಹ ಜಮೀನುಗಳನ್ನು ವಾಪಸ್ ಪಂಚಾಯಿತಿಗೆ ತೆಗೆದುಕೊಂಡು ಕ್ರಮಬದ ವಾಗಿ, ನ್ಯಾಯಬದ್ಧವಾಗಿ ವಂತ್ತು ನಿಯಮಗಳನ್ನು ಅನುಸರಿಸಿ ವಿಲೇವಾರಿ ಮಾಡಿಸುತ್ತೀರಾ ?

ಶ್ರೀ ಎನ್. ರಾಚಯ್ಯ.— ಹಿಂದಿನ ಸರ್ಕಾರದವರು ೧೯೭೦ನೇ ಇಸವಿಯಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ, ತಾ : ೧-೭-೧೯೬೫ರವರೆಗೆ ಯಾರು ಯಾರು ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ, ಅದೆಲ್ಲವನ್ನೂ ಅವರಿಗೆ ಕ್ರಾಯಂ ಮಾಡಬೇಕೆಂದು ತಿಳಿಸಿದ್ದರು. ಅದರಂತೆ ರವಿನ್ಯೂ ಅಧಿಕಾರಿಗಳು ಮಾಡುತ್ತಿದ್ದರು. ಆದರೆ ನಾನು ಈ ಆಲಾಖೆಯನ್ನು ವಹಿಸಿಕೊಂಡಮೇಲೆ ಗೋಮಾಳಕ್ಕೆ ಸಂಬಂಧಪಟ್ಟ ಒಂದು ಜಮೀನನ್ನು ಬಿಡಂಗಡೆ ಮಾಡಬೇಕಾದರೂ ಸಹ ಅದು ಸಂಬಂಧಪಟ್ಟ ಇಲಾಖೆಯ ಮತ್ತು ಸಂಬಂಧಪಟ್ಟ ಮಂತ್ರಿಗಳ ಆಜ್ಞೆಯಿಲ್ಲದೆ ಮಾಡಬಾರದೆಂದು ಹೇಳಿದ್ದೇನೆ. ಆದರಂತೆ ಈಗ ಪ್ರತಿ ತಿಂಗಳೂ ಇದಕ್ಕೆ ಸಂಬಂಧಪಟ್ಟಂತೆ ಹತ್ತಾರು ಫೈಲುಗಳು ಬರುತ್ತಿವೆ. ಈಗ ಒತ್ತುವರಿ ಮಾಡುವುದಕ್ಕಾಗಲೀ ಪರಭಾರೆ ಮಾಡುವುದಕ್ಕಾಗಲೀ ಅವಕಾಶ ಇಲ್ಲ. ಆಂಥಾದ್ದು ಏನಾದರೂ ಕಂಡುಬಂದರೆ ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಜಮೀನುಗಳನ್ನು ಬಿಡಿಸುತ್ತಿದ್ದೇವೆ.

ಶ್ರೀ ಆರ್. ಎಸ್. ಪಾಟೀಲ್.— ಇಲ್ಲಿ ಮೊದಲನೆಯ ಪ್ರಶ್ನೆಗೆ ೫ ಮಂದಿ ಎಂದು ಉತ್ತರ ಕೊಟ್ಟಿದ್ದೀರಿ. ಮಂದೆ (ಉ) ಪ್ರಶ್ನೆಗೆ ಉತ್ತರವಾಗಿ ಒಂದೂ ಇಲ್ಲ ಎಂದು ಹೇಳಿದ್ದೀರಿ. ಅಂದರೆ ಸಂಬಂಧಪಟ್ಟವರ ಮೇಲೆ ಕಾರ್ಯಕ್ರಮ ಕೈಕೊಳ್ಳುವುದರಲ್ಲಿ ವಿಳಂಬವಾಗಿದೆಯೇ ಅಥವಾ ಕ್ರಮ ಕೈಕೊಳ್ಳಬಾರದೆಂದು ಏನಾದರೂ ನಿರ್ಣಯ ತೆಗೆದುಕೊಂಡಿದ್ದೀರಾ ಹೇಗೆ ?

ಶ್ರೀ ಎನ್. ರಾಚಯ್ಯ.— ಇಲ್ಲಿ ಕ್ರಮವಾಗಿ ಕೇಸ್‌ಗಳನ್ನು ದಾಖಲೆ ಮಾಡಿಲ್ಲ. ಈಗ ಪ್ರತಿ ಕೇಸ್‌ನ ಬಗೆಯೂ ಸಹ ವಿಚಾರಣೆಯಾಗುತ್ತಿದೆ. ವಿಚಾರಣೆಯಾದ ಮೇಲೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಕ್ರಮ ಕೈಕೊಳ್ಳುತ್ತೇವೆಂದು ಅದರ ಅರ್ಥ.

ಶ್ರೀ ಕೆ. ಪ್ರಭಾಕರ್.—ಗೊಬ್ಬರ ದುರ್ವಿನಿಯೋಗ ಮಾಡಿ, ಜಮೀನು ಅಕ್ರಮವಾಗಿ ತೆಗೆದುಕೊಂಡಿರತಕ್ಕ ಕೇಸ್‌ಸ್ ಎಷ್ಟು ಎಂದು ಹೇಳಿದರೆ, ಅದಕ್ಕೆ 'ನಿಲ್' ಎಂದು ಒಂದು ಕಡೆ ಹೇಳಿದಿರಿ, ಇನ್ನೊಂದು ಕಡೆ ತಹಶೀಲ್ದಾರ್ ಈ ಕೇಸುಗಳನ್ನು ಎನಕ್ವೈರಿ ಮಾಡುತ್ತಾರೆ ಎಂದು ಹೇಳಿದಿರಿ. ಇದರಲ್ಲಿ ಯಾವುದು ಸತ್ಯ ಸ್ವಾಮಿ ?

ಶ್ರೀ ಎನ್. ರಾಚಯ್ಯ.—ವಿಚಾರ ಮಾಡುವುದು ಕೇಸಸ್ ಆಗುವುದಿಲ್ಲ. ಕೋರ್ಟ್ ಮುಂದೆ ಹೋಗಿ ವಿಚಾರಣೆಯಾದಾಗ ಕೇಸ್ ಎಂದು ಬರುತ್ತದೆ.

Villages in Nagamangala Taluk without Panchayats

783 SRI H.T. KRISHNAPPA (Nagamangala) —:

Will the Minister for Rural Development and Social Welfare be pleased to state.—

(*a*) whether there are any villages in Nagamangala taluk which do not have any Panchayats ;

(*b*) if so, the reasons for the same ?